# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## ನಗರ ಯೋಜನಾ ವಿಭಾಗದಲ್ಲಿ ಅನುಸರಿಸುವ ಕ್ರಮಗಳು

## (STANDARD PROCEDURE)

## ಕೇಂದ್ರ ಕಛೇರಿ

- ಪಾಲಿಕೆಯ ನಗರ ಯೋಜನಾ ವಿಭಾಗದಲ್ಲಿ ಕೇಂದ್ರ ಕಛೇರಿ ಮತ್ತು ವಲಯ ಕಛೇರಿಗಳಾದ, ಪೂರ್ವ / ಪಶ್ಚಿಮ / ದಕ್ಷಿಣ / ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿನಗರ / ಬೊಮ್ಮನಹಳ್ಳಿ ಕಛೇರಿಗಳೊಳಗೊಂಡಿರುತ್ತದೆ.
- ಒಂದು ಮತ್ತು ಒಂದಕ್ಕಿಂತ ಹೆಚ್ಚಿನ ತಳ ಮಹಡಿ + ನೆಲ ಮಹಡಿ + ಮೇಲಿನ ನಾಲ್ಕು ಅಂತಸ್ತುಗಳ 15 ಮೀ ವರೆಗಿನ ಕಟ್ಟಡಗಳಿಗೆ ಮತ್ತು ಅದಕ್ಕಿಂತ ಹೆಚ್ಚಿನ ಅಂತಸ್ತುಗಳ ವಸತಿ ಹಾಗೂ ವಸತಿಯೇತರ ಕಟ್ಟಡಗಳಿಗೆ ಪಾಲಿಕೆಯ ಕೇಂದ್ರ ಕಛೇರಿಯ ನಗರ ಯೋಜನೆ ಶಾಖೆಯಿಂದ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರವನ್ನು ನೀಡಲಾಗುತ್ತದೆ

**ನಕ್ಷೆ ಮಂಜೂರಾತಿ ನೀಡಲು ಅನುಸರಿಸುತ್ತಿರುವ ವಿಧಾನಗಳು**

- ಸಾರ್ವಜನಿಕರು ನಕ್ಷೆ ಮಂಜೂರಾತಿಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಕೆ.ಎಂ.ಸಿ. ಕಾಯ್ದೆ ಸೆಕ್ಷನ್ 299, 304 ಅಥವಾ 312 ರನ್ವಯ ಅಂತರ್ಜಾಲ ತಂತ್ರಾಂಶದ ಮುಖಾಂತರ ಮನವಿ ಸಲ್ಲಿಸಿರುವ ಪತ್ರದೊಂದಿಗೆ ಪರಿಶೀಲನಾ ಶುಲ್ಕದ ಮೊತ್ತದ ಡಿ.ಡಿ.ಯನ್ನು ಮತ್ತು ಆಸ್ತಿಗೆ ಸಂಬಂಧಪಟ್ಟಿರುವ ದಾಖಲಾತಿಯ ಕಡತದೊಂದಿಗೆ ಮನವಿ ಸಲ್ಲಿಸುತ್ತಾರೆ. ಈ ಹಿಂದೆ ಮ್ಯಾನ್ಯುಯಲ್ ನಕ್ಷೆ ಮಂಜೂರಾತಿಯಾಗಿದ್ದಲ್ಲಿ ಪರಿಷ್ಕೃತ ನಕ್ಷೆ ಮಂಜೂರಾತಿಯನ್ನು ಮ್ಯಾನ್ಯುಯಲ್ ಆಗಿ ಪರಿಶೀಲಿಸಲಾಗುವುದು. ಅರ್ಜಿದಾರರು ಅಗತ್ಯವಾದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವ 'ಬಗ್ಗೆ ನ್ಯೂನತೆಗಳು ಕಂಡು ಬಂದಲ್ಲಿ ಅದನ್ನು ಸರಿಪಡಿಸುವಂತೆ ತಿಳಿಸಿ ಅರ್ಜಿದಾರರಿಗೆ ಹಿಂಬರಹ ನೀಡಲಾಗುವುದು. ಒಂದು ವೇಳೆ ಎಲ್ಲಾ ದಾಖಲಾತಿಗಳು ಸರಿ ಇದ್ದಲ್ಲಿ ಒಂದು ವಾರದೊಳಗೆ ಸ್ವತ್ತಿನ ಸ್ಥಳನ್ನು ಪರಿಶೀಲಿಸಲಾಗುವುದು.

  ಮೇಲೆ ತಿಳಿಸಿರುವ ಕ್ರಮವನ್ನು ಸರಿಪಡಿಸಿಕೊಂಡು ಮೂಲ ಕಡತವನ್ನು ಕಂದಾಯ ಶಾಖೆಗೆ ಅಭಿಪ್ರಾಯಕ್ಕಾಗಿ ಕಳುಹಿಸಿಕೊಡಲಾಗುತ್ತದೆ. ಒಂದು ವೇಳೆ ಆಸ್ತಿಯು ಕೆರೆ ಅಥವಾ ನಾಲಾಗೆ ಹೊಂದಿಕೊಂಡಿದ್ದಲ್ಲಿ ಪಾಲಿಕೆಯ ಬೃಹತ್ ಮಳೆ ನೀರುಗಾಗಲುವೆ ಹಾಗೂ ಕೆರೆ ಅಭಿವೃದ್ಧಿ ಯೋಜನೆ ಶಾಖೆಗೆ ಮೂಲ ಕಡತವನ್ನು ಕಳುಹಿಸಿ ಅಭಿಪ್ರಾಯವನ್ನು ಪಡೆಯಲಾಗುವುದು. ಸದರಿ ಶಾಖೆಗಳಿಂದ ಕಡತವು ಹಿಂದಿರುಗಿ ಬಂದ ನಂತರ ಅಭಿಪ್ರಾಯಗಳನ್ನು ಪರಿಶೀಲಿಸಿ, ವಲಯ ನಿಯಮಾವಳಿ ಹಾಗೂ ಕಟ್ಟಡ ಉಪವಿಧಿಗಳನ್ವಯ ನಕ್ಷೆಗಳನ್ನು ಪರಿಶೀಲಿಸಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಮಾನ್ಯ ಆಯುಕ್ತರವರ ಅನುಮೋದನೆಗೆ ಸಲ್ಲಿಸಲಾಗುತ್ತದೆ. ಮಾನ್ಯ ಆಯುಕ್ತರವರಿಂದ ಅನುಮೋದನೆಯಾದ ನಂತರ ಅರ್ಜಿದಾರರಿಗೆ ಅಗತ್ಯ ಶುಲ್ಕಗಳನ್ನು ಪಾವತಿಸಲು ಹಿಂಬರಹ ನೀಡಲಾಗುತ್ತದೆ. ಅರ್ಜಿದಾರರು ಪಾಲಿಕೆಗೆ ಶುಲ್ಕಗಳನ್ನು ಪಾವತಿಸಿದ ನಂತರ, ಪರವಾನಗಿ ಹಾಗೂ ನಕ್ಷೆಗಳನ್ನು ಬಿಡುಗಡೆಗೊಳಿಸಲಾಗುತ್ತದೆ. ಒಟ್ಟಾರೆಯಾಗಿ ಅರ್ಜಿದಾರರು

ಸಲ್ಲಿಸಿರುವ ಮನವಿಯು ಎಲ್ಲಾ ದಾಖಲಾತಿಗಳೊಂದಿಗೆ ಪರಿಪೂರ್ಣವಿದ್ದಲ್ಲಿ 30 ದಿನಗಳೊಳಗೆ ಕಟ್ಟಡದ ನಕ್ಷೆ ಮಂಜೂರಾತಿಯನ್ನು ನೀಡಲಾಗುವುದು. ಸದರಿ ನಕ್ಷೆ ಮಂಜೂರಾತಿಯು, ಮಂಜೂರಾತಿಯ ದಿನಾಂಕದಿಂದ 2 ವರ್ಷಗಳ ವರೆಗೆ ಸಿಂಧುತ್ವವನ್ನು ಹೊಂದಿರುತ್ತದೆ

**ಪ್ರಾರಂಭಿಕ ಪ್ರಮಾಣಪತ್ರ ನೀಡಲು ಅನುಸರಿಸುತ್ತಿರುವ ವಿಧಾನಗಳು**

- ನಕ್ಷೆ ಮಂಜೂರಾತಿ ಪಡೆದುಕೊಂಡ ಪ್ರಕರಣಗಳಿಗೆ ಅರ್ಜಿದಾರರು ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಲು ಕೆ.ಎಂ.ಸಿ. ಕಾಯ್ದೆ ಸೆಕ್ಷನ್ 313 ರನ್ವಯ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿದ ನಂತರ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ, ಕಟ್ಟಡದ ಸ್ಥಳ ಪರಿಶೀಲನೆಯನ್ನು ನಡೆಸಲಾಗುತ್ತದೆ. ಸ್ಥಳ ಪರಿಶೀಲನೆಯ ಸಂದರ್ಭದಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಲ್ಲಿ ಅದನ್ನು ಸರಿಪಡಿಸುವಂತೆ ತಿಳಿಸಿ ಅರ್ಜಿದಾರರಿಗೆ ಹಿಂಬರಹ ನೀಡಲಾಗುತ್ತದೆ. ಒಂದು ವೇಳೆ ಯಾವುದೇ ನ್ಯೂನತೆಗಳಿಲ್ಲದಿದ್ದಲ್ಲಿ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಅಪರ ನಿರ್ದೇಶಕರು (ನಗರ ಯೋಜನೆ) ರವರ ಅನುಮೋದನೆಗೆ ಕಡತವನ್ನು ಸಲ್ಲಿಸಲಾಗುತ್ತದೆ. ಅನುಮೋದನೆಗೊಂಡ ನಂತರ, ಅರ್ಜಿದಾರರಿಗೆ ಅಗತ್ಯ ಶುಲ್ಕವನ್ನು ಪಾವತಿಸಲು ಹಿಂಬರಹ ನೀಡಲಾಗುತ್ತದೆ. ಅರ್ಜಿದಾರರು ಶುಲ್ಕವನ್ನು ಪಾವತಿಸಿದ ನಂತರ ಕಟ್ಟಡದ ಪ್ರಾರಂಭಿಕ ಪ್ರಮಾಣಪತ್ರವನ್ನು ವಿತರಿಸಲಾಗುತ್ತದೆ. ಒಟ್ಟಾರೆಯಾಗಿ ಅರ್ಜಿದಾರರು ಸಲ್ಲಿಸಿರುವ ಮನವಿಯು ಎಲ್ಲಾ ದಾಖಲಾತಿಗಳೊಂದಿಗೆ ಪರಿಪೂರ್ಣವಿದ್ದಲ್ಲಿ 15 ದಿನಗಳೊಳಗೆ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗುವುದು.

**ಸ್ವಾಧೀನಾನುಭವ  ಪ್ರಮಾಣಪತ್ರ ನೀಡಲು ಅನುಸರಿಸುತ್ತಿರುವ ವಿಧಾನಗಳು**

- ನಕ್ಷೆ ಮಂಜೂರಾತಿ ಮತ್ತು ಪ್ರಾರಂಭಿಕ ಪ್ರಮಾಣಪತ್ರವನ್ನು ಪಡೆದುಕೊಂಡು ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿದ ಒಂದು ತಿಂಗಳೊಳಗೆ ಅರ್ಜಿದಾರರು ಕಟ್ಟಡದ ಸ್ವಾಧೀನತೆ ಪಡೆಯುವ ಸಂಬಂಧ ಕೆ.ಎಂ.ಸಿ. ಕಾಯ್ದೆ ಸೆಕ್ಷನ್ 310 ರನ್ವಯ ಸ್ವಾಧೀನಾನುಭವ ಪ್ರಮಾಣಪತ್ರಕ್ಕಾಗಿ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿದ ನಂತರ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ, ಕಟ್ಟಡದ ಸ್ಥಳ ಪರಿಶೀಲನೆಯನ್ನು ನಡೆಸಲಾಗುತ್ತದೆ. ಸ್ಥಳ ಪರಿಶೀಲನೆಯ ಸಂದರ್ಭದಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಲ್ಲಿ ಅದನ್ನು ಸರಿಪಡಿಸುವಂತೆ ತಿಳಿಸಿ ಅರ್ಜಿದಾರರಿಗೆ ಹಿಂಬರಹ ನೀಡಲಾಗುತ್ತದೆ. ಒಂದು ವೇಳೆ ಯಾವುದೇ ನ್ಯೂನತೆಗಳಿಲ್ಲದಿದ್ದಲ್ಲಿ ಸ್ವಾದೀನಾನುಭವ ಪ್ರಮಾಣಪತ್ರ ನೀಡಲು ಪ್ರಸ್ತಾವನೆಯನ್ನು ಮಾನ್ಯ ಆಯುಕ್ತರವರ ಅನುಮೋದನೆಗೆ ಸಲ್ಲಿಸಲಾಗುತ್ತದೆ. ಮಾನ್ಯ ಆಯುಕ್ತರವರ ಅನುಮೋದನೆಯ ನಂತರ, ಅರ್ಜಿದಾರರಿಗೆ ದಂಡದ ಶುಲ್ಕವನ್ನು ಪಾವತಿಸಲು ಹಿಂಬರಹ ನೀಡಲಾಗುತ್ತದೆ. ಅರ್ಜಿದಾರರು ಶುಲ್ಕವನ್ನು ಪಾವತಿಸಿದ ನಂತರ ಕಟ್ಟಡದ ಯಥಾಸ್ಥಿತಿ ನಕ್ಷೆಗಳೊಂದಿಗೆ ಸ್ವಾಧೀನಾನುಭವ ಪ್ರಮಾಣಪತ್ರವನ್ನು ವಿತರಿಸಲಾಗುತ್ತದೆ. ಒಟ್ಟಾರೆಯಾಗಿ ಅರ್ಜಿದಾರರು ಸಲ್ಲಿಸಿರುವ ಮನವಿಯು ಎಲ್ಲಾ ದಾಖಲಾತಿಗಳೊಂದಿಗೆ ಪರಿಪೂರ್ಣವಿದ್ದಲ್ಲಿ 30 ದಿನಗಳೊಳಗೆ ಸ್ವಾಧೀನಾನುಭವ ಪ್ರಮಾಣಪತ್ರವನ್ನು ನೀಡಲಾಗುವುದು.

# ವಲಯ ಕಛೇರಿ

- ಪಾಲಿಕೆಯ ನಗರ ಯೋಜನಾ ವಿಭಾಗದಲ್ಲಿ ಕೇಂದ್ರ ಕಛೇರಿ ಮತ್ತು ವಲಯ ಕಛೇರಿಗಳಾದ, ಪೂರ್ವ / ಪಶ್ಚಿಮ / ದಕ್ಷಿಣ / ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿನಗರ / ಬೊಮ್ಮನಹಳ್ಳಿ ಕಛೇರಿಗಳೊಳಗೊಂಡಿರುತ್ತದೆ.
- 4000 ಚ.ಅ. ವರೆಗಿನ ನಿವೇಶನದಲ್ಲಿ 4 ವಸತಿ ಘಟಕಗಳಿಗೆ ಆಯಾ ವಲಯ ಕಛೇರಿಗಳಲ್ಲಿ ಸುವರ್ಣ ಪರವಾನಗಿ ಯೋಜನೆಯಡಿಯಲ್ಲಿ ನಕ್ಷೆ ಮಂಜೂರಾತಿಯನ್ನು ನೀಡಲಾಗುತ್ತಿದೆ ಹಾಗೂ ಒಂದು ತಳ + ನೆಲ + ಮೇಲಿನ 3 ಅಂತಸ್ತುಗಳ (ಮೆಜನೈನ್ ಸೇರಿಸಿ) 15.00 ಮೀ. ಎತ್ತರದವರೆಗಿನ 5 ಮತ್ತು 5 ಕ್ಕಿಂತ ಹೆಚ್ಚಿನ ವಸತಿ ಮತ್ತು ವಸತಿಯೇತರ ಕಟ್ಟಡಗಳಿಗೆ ಸಂಬಂಧಪಟ್ಟ ವಲಯ ಕಛೇರಿಗಳಲ್ಲಿ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರವನ್ನು ನೀಡಲಾಗುತ್ತದೆ

**<u>ವಲಯ ಕಛೇರಿಯಲ್ಲಿ ನಕ್ಷೆ ಮಂಜೂರಾತಿ ನೀಡಲು ಅನುಸರಿಸುತ್ತಿರುವ ವಿಧಾನಗಳು</u>**

- 4000 ಚ.ಅ. ವರೆಗಿನ 4 ಘಟಕಗಳುಳ್ಳ ವಸತಿ ಕಟ್ಟಡಗಳಿಗೆ ಸಾರ್ವಜನಿಕರು ನಕ್ಷೆ ಮಂಜೂರಾತಿಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಕೆ.ಎಂ.ಸಿ. ಕಾಯ್ದೆ ಸೆಕ್ಷನ್ 299, 304 ಅಥವಾ 312 ರನ್ವಯ ಅಂತರ್ಜಾಲ ತಂತ್ರಾಂಶದ ಮುಖಾಂತರ ಮನವಿ ಸಲ್ಲಿಸಿರುವ ಪತ್ರದೊಂದಿಗೆ ಪರಿಶೀಲನಾ ಶುಲ್ಕದ ಮೊತ್ತದ ಡಿ.ಡಿ.ಯನ್ನು ಮತ್ತು ಆಸ್ತಿಗೆ ಸಂಬಂಧಪಟ್ಟಿರುವ ದಾಖಲಾತಿಯ ಕಡತದೊಂದಿಗೆ ಮನವಿ ಸಲ್ಲಿಸುತ್ತಾರೆ. ಸದರಿ ದಾಖಲಾತಿಗಳನ್ನು ಹಾಗೂ ಸ್ಥಳವನ್ನು ಪರಿಶೀಲಿಸಿ ಎಲ್ಲಾ ನ್ಯೂನತೆಗಳನ್ನು ವಲಯ ನಿಯಮಾವಳಿ ಹಾಗೂ ಕಟ್ಟಡ ಉಪವಿಧಿಗಳಿಗನುಗುಣವಾಗಿ ಸರಿಪಡಿಸಿಕೊಂಡು, ಅರ್ಜಿದಾರರಿಗೆ ನಕ್ಷೆ ಮಂಜೂರಾತಿಯ ಅಗತ್ಯ ಶುಲ್ಕ ಮತ್ತು ರಸ್ತೆ ಅಗೆತದ ಶುಲ್ಕಗಳನ್ನು ಪಾವತಿಸಲು ಹಿಂಬರಹ ನೀಡುತ್ತಾರೆ. ಅರ್ಜಿದಾರರಿಂದ ಪೂರ್ಣ ಪ್ರಮಾಣದ ಶುಲ್ಕಗಳನ್ನು ಪಾವತಿಸಿಕೊಂಡು ನಕ್ಷೆ ಮಂಜೂರಾತಿಯನ್ನು ನೀಡುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಮನವಿಯು ಎಲ್ಲಾ ದಾಖಲಾತಿಗಳೊಂದಿಗೆ ಪರಿಪೂರ್ಣವಿದ್ದಲ್ಲಿ 10 ದಿನಗಳೊಳಗೆ ನಕ್ಷೆ ಮಂಜೂರಾತಿಯನ್ನು ನೀಡಲಾಗುತ್ತದೆ.
- ಸಾರ್ವಜನಿಕರು 5 ಮತ್ತು 5 ಕ್ಕಿಂತ ಹೆಚ್ಚಿನ ಘಟಕಗಳುಳ್ಳ ವಸತಿ ಸಮುಚ್ಚಯ ಹಾಗೂ ವಸತಿಯೇತರ ಕಟ್ಟಡಗಳ ನಕ್ಷೆ ಮಂಜೂರಾತಿಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಕೆ.ಎಂ.ಸಿ. ಕಾಯ್ದೆ ಸೆಕ್ಷನ್ 299, 304 ಅಥವಾ 312 ರನ್ವಯ ಅಂತರ್ಜಾಲ ತಂತ್ರಾಂಶದ ಮುಖಾಂತರ ಮನವಿ ಸಲ್ಲಿಸಿರುವ ಪತ್ರದೊಂದಿಗೆ ಪರಿಶೀಲನಾ ಶುಲ್ಕದ ಮೊತ್ತದ ಡಿ.ಡಿ.ಯನ್ನು ಮತ್ತು ಆಸ್ತಿಗೆ ಸಂಬಂಧಪಟ್ಟಿರುವ ದಾಖಲಾತಿಯ ಕಡತದೊಂದಿಗೆ ಮನವಿ ಸಲ್ಲಿಸುತ್ತಾರೆ. ಈ ಹಿಂದೆ ಮ್ಯಾನ್ಯುಯಲ್ ನಕ್ಷೆ ಮಂಜೂರಾತಿಯಾಗಿದ್ದಲ್ಲಿ ಪರಿಷ್ಕೃತ ನಕ್ಷೆ ಮಂಜೂರಾತಿಯನ್ನು ಮ್ಯಾನ್ಯುಯಲ್ ಆಗಿ ಪರಿಶೀಲಿಸಲಾಗುವುದು. ಅರ್ಜಿದಾರರು ಅಗತ್ಯವಾದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವ ಬಗ್ಗೆ ನ್ಯೂನತೆಗಳು ಕಂಡು ಬಂದಲ್ಲಿ ಅದನ್ನು ಸರಿಪಡಿಸುವಂತೆ ತಿಳಿಸಿ ಅರ್ಜಿದಾರರಿಗೆ ಹಿಂಬರಹ ನೀಡಲಾಗುವುದು. ಒಂದು ವೇಳೆ ಎಲ್ಲಾ ದಾಖಲಾತಿಗಳು ಸರಿ ಇದ್ದಲ್ಲಿ ಒಂದು ವಾರದೊಳಗೆ ಸ್ವತ್ತಿನ ಸ್ಥಳನ್ನು ಪರಿಶೀಲಿಸಲಾಗುವುದು.

ಮೇಲಿನ ಕ್ರಮವನ್ನು ವಹಿಸಿದ ನಂತರ, ವಲಯ ನಿಯಮಾವಳಿ ಹಾಗೂ ಕಟ್ಟಡ ಉಪವಿಧಿಗಳನ್ವಯ ನಕ್ಷೆಗಳನ್ನು ಸಹಾಯಕ ನಿರ್ದೇಶಕರವರು ಪರಿಶೀಲಿಸಿ, ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ನಕ್ಷೆ ಪರಿಶೀಲನಾ ಸಮಿತಿ ಸಭೆಗೆ ಮಂಡಿಸುತ್ತಾರೆ. ಸಮಿತಿಯು ಪ್ರಸ್ತಾವನೆಗೆ ಅನುಮೋದನೆ ನೀಡಿದ

ನಂತರ ಅರ್ಜಿದಾರರಿಗೆ ಅಗತ್ಯ ಶುಲ್ಕಗಳನ್ನು ಪಾವತಿಸಲು ಹಿಂಬರಹ ನೀಡುತ್ತಾರೆ. ಅರ್ಜಿದಾರರು ಪಾಲಿಕೆಗೆ ಶುಲ್ಕಗಳನ್ನು ಪಾವತಿಸಿದ ನಂತರ, ಪರವಾನಗಿ ಹಾಗೂ ನಕ್ಷೆಗಳನ್ನು ಬಿಡುಗಡೆಗೊಳಿಸಲಾಗುತ್ತದೆ. ಒಟ್ಟಾರೆಯಾಗಿ ಅರ್ಜಿದಾರರು ಸಲ್ಲಿಸಿರುವ ಮನವಿಯು ಎಲ್ಲಾ ದಾಖಲಾತಿಗಳೊಂದಿಗೆ ಪರಿಪೂರ್ಣವಿದ್ದಲ್ಲಿ 30 ದಿನಗಳೊಳಗೆ ಕಟ್ಟಡದ ನಕ್ಷೆ ಮಂಜೂರಾತಿಯನ್ನು ನೀಡಲಾಗುವುದು. ಸದರಿ ನಕ್ಷೆ ಮಂಜೂರಾತಿಯು, ಮಂಜೂರಾತಿಯ ದಿನಾಂಕದಿಂದ 2 ವರ್ಷಗಳ ವರೆಗೆ ಸಿಂಧುತ್ವವನ್ನು ಹೊಂದಿರುತ್ತದೆ.

**<u>ವಲಯ ಕಛೇರಿಯಲ್ಲಿ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಅನುಸರಿಸುತ್ತಿರುವ ವಿಧಾನಗಳು</u>**

- ನಕ್ಷೆ ಮಂಜೂರಾತಿ ಪಡೆದುಕೊಂಡ ಪ್ರಕರಣಗಳಿಗೆ ಅರ್ಜಿದಾರರು ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಲು ಕೆ.ಎಂ.ಸಿ. ಕಾಯ್ದೆ ಸೆಕ್ಷನ್ 313 ರನ್ವಯ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿದ ನಂತರ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ, ಕಟ್ಟಡದ ಸ್ಥಳ ಪರಿಶೀಲನೆಯನ್ನು ನಡೆಸಲಾಗುತ್ತದೆ. ಸ್ಥಳ ಪರಿಶೀಲನೆಯ ಸಂದರ್ಭದಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಲ್ಲಿ ಅದನ್ನು ಸರಿಪಡಿಸುವಂತೆ ತಿಳಿಸಿ ಅರ್ಜಿದಾರರಿಗೆ ಹಿಂಬರಹ ನೀಡಲಾಗುತ್ತದೆ. ಒಂದು ವೇಳೆ ಯಾವುದೇ ನ್ಯೂನತೆಗಳಿಲ್ಲದಿದ್ದಲ್ಲಿ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಅಪರ / ಜಂಟಿ ಆಯುಕ್ತರವರುಗಳ ಅನುಮೋದನೆಗೆ ಕಡತವನ್ನು ಸಲ್ಲಿಸಲಾಗುತ್ತದೆ. ಅನುಮೋದನೆಗೊಂಡ ನಂತರ, ಅರ್ಜಿದಾರರಿಗೆ ಅಗತ್ಯ ಶುಲ್ಕವನ್ನು ಪಾವತಿಸಲು ಹಿಂಬರಹ ನೀಡಲಾಗುತ್ತದೆ. ಅರ್ಜಿದಾರರು ಶುಲ್ಕವನ್ನು ಪಾವತಿಸಿದ ನಂತರ ಕಟ್ಟಡದ ಪ್ರಾರಂಭಿಕ ಪ್ರಮಾಣಪತ್ರವನ್ನು ವಿತರಿಸಲಾಗುತ್ತದೆ. ಒಟ್ಟಾರೆಯಾಗಿ ಅರ್ಜಿದಾರರು ಸಲ್ಲಿಸಿರುವ ಮನವಿಯು ಎಲ್ಲಾ ದಾಖಲಾತಿಗಳೊಂದಿಗೆ ಪರಿಪೂರ್ಣವಿದ್ದಲ್ಲಿ 15 ದಿನಗಳೊಳಗೆ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗುವುದು.

**<u>ವಲಯ ಕಛೇರಿಯಲ್ಲಿ ಸ್ವಾಧೀನಾನುಭವ ಪ್ರಮಾಣಪತ್ರ ನೀಡಲು ಅನುಸರಿಸುತ್ತಿರುವ ವಿಧಾನಗಳು</u>**

- ನಕ್ಷೆ ಮಂಜೂರಾತಿ ಮತ್ತು ಪ್ರಾರಂಭಿಕ ಪ್ರಮಾಣಪತ್ರವನ್ನು ಪಡೆದುಕೊಂಡು ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿದ ಒಂದು ತಿಂಗಳೊಳಗೆ ಅರ್ಜಿದಾರರು ಕಟ್ಟಡದ ಸ್ವಾಧೀನತೆ ಪಡೆಯುವ ಸಂಬಂಧ ಕೆ.ಎಂ.ಸಿ. ಕಾಯ್ದೆ ಸೆಕ್ಷನ್ 310 ರನ್ವಯ ಸ್ವಾಧೀನಾನುಭವ ಪ್ರಮಾಣಪತ್ರಕ್ಕಾಗಿ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿದ ನಂತರ, ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ, ಕಟ್ಟಡದ ಸ್ಥಳ ಪರಿಶೀಲನೆಯನ್ನು ನಡೆಸಲಾಗುತ್ತದೆ. ಸ್ಥಳ ಪರಿಶೀಲನೆಯ ಸಂದರ್ಭದಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಲ್ಲಿ ಅದನ್ನು ಸರಿಪಡಿಸುವಂತೆ ತಿಳಿಸಿ ಅರ್ಜಿದಾರರಿಗೆ ಹಿಂಬರಹ ನೀಡಲಾಗುತ್ತದೆ. ಒಂದು ವೇಳೆ ಯಾವುದೇ ನ್ಯೂನತೆಗಳಿಲ್ಲದಿದ್ದಲ್ಲಿ ಸ್ವಾದೀನಾನುಭವ ಪ್ರಮಾಣಪತ್ರ ನೀಡಲು ಪ್ರಸ್ತಾವನೆಯನ್ನು ಅಪರ / ಜಂಟಿ ಆಯುಕ್ತರವರ ಅನುಮೋದನೆಗೆ ಸಲ್ಲಿಸಲಾಗುತ್ತದೆ. ಅನುಮೋದನೆಯ ನಂತರ, ಅರ್ಜಿದಾರರಿಗೆ ದಂಡದ ಶುಲ್ಕವನ್ನು ಪಾವತಿಸಲು ಹಿಂಬರಹ ನೀಡಲಾಗುತ್ತದೆ. ಅರ್ಜಿದಾರರು ಶುಲ್ಕವನ್ನು ಪಾವತಿಸಿದ ನಂತರ ಕಟ್ಟಡದ ಯಥಾಸ್ಥಿತಿ ನಕ್ಷೆಗಳೊಂದಿಗೆ ಸ್ವಾಧೀನಾನುಭವ ಪ್ರಮಾಣಪತ್ರವನ್ನು ವಿತರಿಸಲಾಗುತ್ತದೆ. ಒಟ್ಟಾರೆಯಾಗಿ ಅರ್ಜಿದಾರರು ಸಲ್ಲಿಸಿರುವ ಮನವಿಯು ಎಲ್ಲಾ ದಾಖಲಾತಿಗಳೊಂದಿಗೆ ಪರಿಪೂರ್ಣವಿದ್ದಲ್ಲಿ 30 ದಿನಗಳೊಳಗೆ ಸ್ವಾಧೀನಾನುಭವ ಪ್ರಮಾಣಪತ್ರವನ್ನು ನೀಡಲಾಗುವುದು.

## ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ

- ಪಾಲಿಕೆಯ ವಲಯ ಕಛೇರಿಗಳಾದ, ಪೂರ್ವ / ಪಶ್ಚಿಮ / ದಕ್ಷಿಣ / ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿನಗರ / ಬೊಮ್ಮನಹಳ್ಳಿ ಕಛೇರಿಯ ಅಧೀನಗೊಳಪಡುವ ಎಲ್ಲಾ ಉಪ ವಿಭಾಗಗಳು
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು, 2400 ಚ.ಅ. ವಿಸ್ತೀರ್ಣದವರೆಗಿನ ನಿವೇಶನಗಳಲ್ಲಿ ಏಕ ವಾಸ ಘಟಕಗಳಿಗೆ ಮ್ಯಾನ್ಯುಯಲ್ ಪದ್ಧತಿಯಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ರಡಿಯಲ್ಲಿ (ಸಕಾಲ) ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ಸ್ವೀಕರಿಸಿದ ನಂತರ ಸ್ಥಳವನ್ನು ಪರಿಶೀಲಿಸಿ ಎಲ್ಲಾ ನ್ಯೂನತೆಗಳನ್ನು ವಲಯ ನಿಯಮಾವಳಿ ಹಾಗೂ ಕಟ್ಟಡ ಉಪವಿಧಿಗಳಿಗನುಗುಣವಾಗಿ ಸರಿಪಡಿಸಿಕೊಂಡು, ಅರ್ಜಿದಾರರಿಗೆ ನಕ್ಷೆ ಮಂಜೂರಾತಿಯ ಅಗತ್ಯ ಶುಲ್ಕ ಮತ್ತು ರಸ್ತೆ ಅಗೆತದ ಶುಲ್ಕಗಳನ್ನು ಪಾವತಿಸಲು ಹಿಂಬರಹ ನೀಡುತ್ತಾರೆ. ಅರ್ಜಿದಾರರಿಂದ ಪೂರ್ಣ ಪ್ರಮಾಣದ ಶುಲ್ಕಗಳನ್ನು ಪಾವತಿಸಿಕೊಂಡು ನಕ್ಷೆ ಮಂಜೂರಾತಿಯನ್ನು ನೀಡಲಾಗುತ್ತಿದೆ. ಒಟ್ಟಾರೆಯಾಗಿ ಅರ್ಜಿದಾರರು ಸಲ್ಲಿಸಿರುವ ಮನವಿಯು ಎಲ್ಲಾ ದಾಖಲಾತಿಗಳೊಂದಿಗೆ ಪರಿಪೂರ್ಣವಿದ್ದಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011 ರಡಿಯಲ್ಲಿ (ಸಕಾಲ) 30 ದಿನಗಳೊಳಗೆ ನಕ್ಷೆ ಮಂಜೂರಾತಿಯನ್ನು ನೀಡಲಾಗುತ್ತದೆ.

**ಅಪರ ನಿರ್ದೇಶಕರು (ನಗರ ಯೋಜನೆ) ಪರವಾಗಿ**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**